# ಶ್ರೀಮಾತೆಯವರ ಪದಾಶ್ರಯದಲ್ಲಿ

ಬಂಗಾಳಿ ಮೂಲ: **ಬ್ರಹ್ಮಚಾರಿ ಅಕ್ಷಯಚೈತನ್ಯ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಬುದ್ಧಿ ಬೆಳೆದಂದಿನಿಂದಲೂ ನನಗೆ ಅನುಭವಕ್ಕೆ ಬಂದಿದೆ – ಅಂತರಂಗ–ಬಹಿರಂಗ ಎರಡರಲ್ಲೂ ಸಮತೋಲನ ಕಾಪಾಡಿಕೊಂಡು ಗುರಿಯತ್ತ ಸಾಗುವುದು ಎಷ್ಟೊಂದು ಕಠಿಣ ಎಂದು. ಬಯಸದೇ ಬಂದ, ಸನ್ನಿವೇಶದ ಬಲದಿಂದ ಹಾಗೂ ಸಂಸ್ಕಾರದ ಬಲದಿಂದ ಉಂಟಾದ ಅಸಹಾಯಕತೆಯಲ್ಲಿ ದೈವೀಶಕ್ತಿಯು ಅರಿವಿಲ್ಲದೆ ಪ್ರಭಾವ ಬೀರುವುದು, ಹಾಗೂ 'ಮಹತೀ ವಿನಷ್ಟಿಃ' (ಮಹತ್ತಾದ ವಿನಾಶ) ಯಿಂದ ರಕ್ಷಣೆ ನೀಡುವುದು.

ನನ್ನ ವಯಸ್ಸು ಆಗತಾನೇ ೧೮ ಪೂರ್ಣಗೊಂಡಿತ್ತಷ್ಟೆ. ಬಹುಶಃ ಜೀವನದ ಹೋರಾಟದಿಂದಾಗಿ ಉಂಟಾದ ಪರಿಣಾಮ ಅದಾಗಿರಬೇಕು; ನನಗೆ ಮರಣಾಂತಿಕ ಕಾಯಿಲೆ ಬಂದು ಆಕ್ರಮಿಸಿಕೊಂಡಿತು – ಸನ್ನಿಪಾತ ಜ್ವರ ಹಾಗೂ ಅತಿಸಾರ (ಭೇದಿ ರೋಗ). ನೋಡುತ್ತಿದ್ದಂತೆಯೇ ನಾನು ಮೂಳೆಚಕ್ಕಳವಾಗಿಬಿಟ್ಟೆ. ಒಂದು ದಿನ ನಾನು ಮಲಗಿದ್ದಂತೆಯೇ ಮೂರ್ಛೆ ಹೋದೆ. ನಾನು ಸತ್ತೇ ಹೋದೆನೆಂದು ಭಾವಿಸಿ ಎಲ್ಲರೂ ಅಳಲಾರಂಭಿಸಿದರು. ಮರುದಿನ ಬೆಳಿಗ್ಗೆ ಒಬ್ಬ ಭಿಕ್ಷೆ ಬೇಡುತ್ತಿದ್ದ ಬ್ರಾಹ್ಮಣ ಬಂದು ಹೇಳಿದ, ''ಮಗೂ, ನಿನಗೇನೂ ಭಯವಿಲ್ಲ. ನಿನ್ನನ್ನು ಈ ಅವಸ್ಥೆಯಲ್ಲಿ ನೋಡಿದ್ದೆ. ನನ್ನ ಮಗಳೂ ಹಾಸಿಗೆ ಹಿಡಿದಿದ್ದಳು. ನಿಮ್ಮಿಬ್ಬರಲ್ಲಿ ಒಬ್ಬರು ಸತ್ತುಹೋಗುವರು ಎಂದು ನನಗೆ ಗೊತ್ತಿತ್ತು. ನಿನ್ನೆ ನನ್ನ ಮಗಳು ಸತ್ತುಹೋದಳು.'' ಒಂದೂವರೆ ತಿಂಗಳು ಮಲಗಿದ್ದು, ಕೋಲಿನ ಸಹಾಯದಿಂದ ನಡೆದಾಡಲು ಅಭ್ಯಾಸ ಮಾಡುತ್ತಿದ್ದೆ.

ನನ್ನ ರೋಗ ಸ್ನೇಹಿತನಂತೆ ಕೆಲಸ ಮಾಡಿತು. ಅದು ನನಗೆ ಮರಣಭಯವನ್ನು ತೋರಿಸಿಕೊಟ್ಟಿತು; ಹಾಗೂ ಜಗದ್ಗುರುವನ್ನು ಆಶ್ರಯಿಸುವಂತೆ ಮನಸ್ಸು ವ್ಯಾಕುಲಗೊಂಡಿತು. ನಮ್ಮ ಗ್ರಾಮದ ಯತೀಂದ್ರ ದತ್ತನು ಶ್ರೀಮಾತೆ ಶಾರದಾದೇವಿಯವರಿಂದ ಮಂತ್ರದೀಕ್ಷೆ ಪಡೆದುಕೊಂಡಿದ್ದ. ಅವರ ವಿಷಯವನ್ನು ನಮಗೆಲ್ಲ ಅವನು ತಿಳಿಸಿದ್ದ. ನಾನು ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆಯಲು ಪ್ರಾರ್ಥಿಸಿಕೊಳ್ಳಬೇಕೆಂದು ನಿರ್ಧರಿಸಿದೆ. ಶಾಲೆಯ ಅಧ್ಯಾಪಕರಾಗಿದ್ದ ಅತುಲಚಂದ್ರ ಚೌಧುರಿಯವರಿಗೆ ಈ ವಿಷಯವನ್ನು ತಿಳಿಸಿದಾಗ, ಅವರು ಸ್ವಲ್ಪ ಹಣವನ್ನು ಕಳುಹಿಸಿಕೊಟ್ಟರು. ಕಲ್ಕತ್ತೆಯ ಪಾಟಾಲಡಂಗದಲ್ಲಿದ್ದ ಒಂದು ಮೆಸ್‌ನಲ್ಲಿ – ಯಶೋದಾ ಕುಮಾರ ಮೋದಕ್ ಎಂಬವನ ಬಳಿ – ತಂಗಲು ವ್ಯವಸ್ಥೆ ಮಾಡಿಕೊಟ್ಟರು. ಅತುಲಬಾಬು ಹಾಗೂ ಯಶೋದಾಬಾಬು ಇಬ್ಬರೂ ಶ್ರೀಮಾತೆಯವರಿಂದ ದೀಕ್ಷೆ ಪಡೆದಿದ್ದರು.

ದೊಡ್ಡ ರಜೆಯ ಸಂದರ್ಭದಲ್ಲಿ ನಾನು ಕಲ್ಕತ್ತೆಗೆ ಹೋದೆ. ಸ್ಟೀಮರ್‌ನಲ್ಲಿ ಹೋಗುತ್ತಿದಾಗ, ಹಬಿಗಂಜ್‌ನಿಂದ ಒಬ್ಬ ಕಲ್ಕತ್ತೆಗೆ ಪ್ರಯಾಣ ಮಾಡುತ್ತಿದ್ದವನು, ಬೇರೊಬ್ಬ ವ್ಯಕ್ತಿಯೊಂದಿಗೆ ಹೀಗೆ ಮಾತುಕತೆ ನಡೆಸುತ್ತಿದ್ದ: ''ನೀವೇಕೆ ಕಲ್ಕತ್ತೆಗೆ ಹೋಗುತ್ತಿದ್ದೀರಿ? ದೀಕ್ಷೆ ಪಡೆಯುವ ಸಲುವಾಗಿಯೇನು?'' ''ಹಾಗಂತ ನನ್ನ ಬಯಕೆ.'' ''ನಿಮ್ಮ ಬಳಿ ಅನುಮತಿ ಪತ್ರ ಇದೆಯೆ?'' ''ಇಲ್ಲ.'' '' ಹಾಗಿದ್ದರೆ ನಿಮ್ಮ ದೀಕ್ಷೆ ನಡೆಯದು. ನನ್ನದು ನಡೆಯುವುದು. ಇದೋ ನೋಡಿ, ಶ್ರೀಮಾತೆಯವರಿಂದ ದೀಕ್ಷೆ ಪಡೆಯುವುದಕ್ಕಾಗಿ ಸ್ವಾಮಿ ಬ್ರಹ್ಮಾನಂದರು ನನಗೆ ಅನುಮತಿ ನೀಡಿ ಪತ್ರ ಬರೆದಿದ್ದಾರೆ.'' ಆ ವ್ಯಕ್ತಿ (ಅವಿನಾಶ್ ದೇವ) ಹಾಗೂ ನಾವು ಮೂರು ಜನ (ಶ್ರೀವಾಸ ದಾಸ, ಮಾನಗೋವಿಂದ ಚೌಧುರಿ ಹಾಗೂ ನಾನು) ಯಶೋದಾ ಬಾಬುವಿನ ಬಳಿ ನಾಲ್ಕೈದು ದಿನ ತಂಗಲಿದ್ದೇವೆ. ಶ್ರೀಮಾತೆಯವರಿಂದ ನಮಗೆ ಮೂವರಿಗೂ ಮಂತ್ರದೀಕ್ಷೆ ದೊರಕಿತು, ಆದರೆ ಆ ವ್ಯಕ್ತಿಗೆ ಸಿಗಲಿಲ್ಲ. ಶ್ರೀಮಾತೆ ಅವರಿಗೆ ದೀಕ್ಷೆ ನೀಡಲು ನಿರಾಕರಿಸಿದ್ದೇನೂ ಅಲ್ಲ; ಆದರೆ ಆತನು ತನ್ನ ಕರ್ಮವಿಪಾಕದಂತೆ ತಾನೇ ದೂರ ಉಳಿದುಬಿಟ್ಟ.

೧೯೧೮ರ ಡಿಸೆಂಬರ್ ೨೯ರಂದು ಭಾನುವಾರ, ಕೃಷ್ಣ ದ್ವಾದಶಿಯಂದು ಬಾಗ್‌ಬಜಾರಿನ 'ಶ್ರೀಮಾತೆಯವರ ಮನೆ' ('ಉದ್ಬೋಧನ')ದಲ್ಲಿ ನಮಗೆ ಮಂತ್ರದೀಕ್ಷೆಯಾಯಿತು. ಅಂದು ಸಂಜೆ ಮತ್ತೊಮ್ಮೆ ನಾವು ಶ್ರೀಮಾತೆಯವರ ಬಳಿಗೆ ಹೋದೆವು. ಎಲ್ಲರ ಪ್ರಣಾಮವಾದ ನಂತರ ನಾವು ಪ್ರಣಾಮ ಮಾಡಿದೆವು. ಶ್ರೀಮಾತೆ ಮಂಚದಲ್ಲಿ ಕಾಲುನೀಡಿ ಕುಳಿತಿದ್ದರು. ಮುಖದ ಮೇಲೆ ಸೆರಗನ್ನೆಳೆದುಕೊಂಡಿದ್ದರು. ನಾನು ಅವರ ಪಾದಕಮಲಗಳ ಮೇಲೆ ನನ್ನ ತಲೆಯನ್ನಿಟ್ಟು ನಮಸ್ಕರಿಸಿದೆ. ಅವರು ತಮ್ಮ ಎಡಗಾಲಿನ ಹೆಬ್ಬೆರಳನ್ನು ಮೃದುವಾಗಿ ಮೇಲಕ್ಕೆತ್ತಿ, ನನ್ನ ಕೆನ್ನೆಯ ಮೇಲೆ ಸ್ಪರ್ಶಿಸಿದರು.

ಶ್ರೀಮಾತೆಯವರು ಬಾಗ್‌ಬಜಾರಿನಲ್ಲಿ ತಂಗಿದ್ದ ಮೂರು ದಿನಗಳಲ್ಲಿ ನಾನು ನಾಲ್ಕು ಬಾರಿ ಅವರ ದರ್ಶನ ಪಡೆದೆ. ಪೂಜ್ಯ ಶರತ್ ಮಹಾರಾಜ್ (ಸ್ವಾಮಿ ಶಾರದಾನಂದರು), ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು), ಮಹಾಪುರುಷ್ ಮಹಾರಾಜ್ (ಸ್ವಾಮಿ ಶಿವಾನಂದರು) – ಈ ಮೂವರ ದರ್ಶನವನ್ನೂ 'ಉದ್ಬೋಧನ'ದಲ್ಲಿ, ಬಸು ಭವನದಲ್ಲಿ (ಬಲರಾಮ ಮಂದಿರದಲ್ಲಿ) ಹಾಗೂ ಬೇಲೂರು ಮಠದಲ್ಲಿ ಪಡೆದೆ.

ಶ್ರೀಗುರುವಿನ ದರ್ಶನ, ಸ್ಪರ್ಶನದಿಂದ ಉಂಟಾಗುವ ಶಕ್ತಿ ಸಂಚಾರದ ಪರಿಣಾಮವಾಗಿ ಒಂದು ವರ್ಷದ ತನಕ ನನ್ನ

ಮನಸ್ಸಿನ ಶಾಂತಭಾವ ನಷ್ಟ ಹೊಂದಲಿಲ್ಲ; ದೇಹ ಕೂಡ ಪುನಶ್ಚೇತನಗೊಂಡಿತು. ಕರೀಂಗಂಜ್‌ನ ಸಮೀಪ ಇದ್ದ ಅಕ್ಬರ್‌ಪುರ್‌ನಲ್ಲಿ ಒಂದು ಕೃಷಿ ಕಂಪೆನಿಯಲ್ಲಿ ನನ್ನ ಗುರುಭಾಯಿ ಸುರೇಂದ್ರ ಗುಪ್ತನಿದ್ದ; ಅವನ ಬಳಿಗೆ ಆಗಾಗ ಹೋಗಿ ಇರುತ್ತಿದ್ದೆ. ಅವನು ಮುಂದೆ ರಾಮಕೃಷ್ಣ ಮಹಾಸಂಘವನ್ನು ಸೇರಿ ಸ್ವಾಮಿ ಸತ್ಸಂಗಾನಂದ ಎಂಬ ಹೆಸರನ್ನು ಪಡೆದ. ಅವನು ನನ್ನೊಂದಿಗೆ ಜೀವನಪೂರ್ತಿ ಸ್ನೇಹಸಂಬಂಧವನ್ನಿಟ್ಟುಕೊಂಡಿದ್ದ.

ನನ್ನ ಅನಾರೋಗ್ಯ ವಾಸಿಯಾದ ನಂತರ ನಾನು ಪೂಜ್ಯ ಹರಿ ಮಹಾರಾಜರಿಗೆ (ಸ್ವಾಮಿ ತುರೀಯಾನಂದರು) ಪತ್ರ ಬರೆದಿದ್ದೆ. ನನ್ನ ದೀಕ್ಷೆಯಾದ ಕೆಲವು ದಿನಗಳ ನಂತರ ನಾನು ಇನ್ನೂ ಮೂರು ಪತ್ರಗಳನ್ನು ಅವರಿಗೆ ಬರೆದಿದ್ದೆ. ಈ ನಾಲ್ಕೂ ಪತ್ರಗಳಿಗೆ ಅವರು ವಿಸ್ತೃತವಾಗಿ ಉತ್ತರ ಬರೆದಿದ್ದರು. ಒಬ್ಬರು ಸಾಧುಗಳು ಈ ಅಮೂಲ್ಯವಾದ ಪತ್ರಗಳನ್ನು ತೆಗೆದುಕೊಂಡು ಹೋಗಿದ್ದರು. ಅದನ್ನೂ ಪ್ರತಿ ಮಾಡಿಸಿಕೊಂಡು ಬಳಿಕ ಹಿಂದಿರುಗಿಸುವುದಾಗಿ ಹೇಳಿದ್ದರು. ಆದರೆ ಅವರು ತಮ್ಮ ಮಾತನ್ನು ಉಳಿಸಿಕೊಳ್ಳಲಿಲ್ಲ. ಅನೇಕ ವರ್ಷಗಳ ನಂತರ, 'ಸ್ವಾಮಿ ತುರೀಯಾನಂದರ ಪತ್ರಗಳು' ಎಂಬ ಗ್ರಂಥದಲ್ಲಿ ಈ ಪತ್ರಗಳು ಪ್ರಕಟವಾಗಿದ್ದವು. ಈ ಪತ್ರಗಳಲ್ಲಿ 'ಶ್ರೀಮಾನ್ ರಮೇಶ್', 'ಪ್ರಿಯ ರಮೇಶ್' ಅಥವಾ 'ಶ್ರೀಮಾನ್ ರಮೇಶ್ ಚಂದ್ರ' ಎಂದು ಸಂಬೋಧಿಸಲಾಗಿದೆ.

**ಹರಿ ಮಹಾರಾಜರ ಎರಡನೇ ಪತ್ರ**

ಶ್ರೀ ಶ್ರೀದುರ್ಗಾ ಸಹಾಯ

ಕಾಶೀಧಾಮ

೧೮.೬.೧೯೧೯

ಪ್ರಿಯ ರಮೇಶ್,

ನಿನ್ನ ದಿನಾಂಕವಿಲ್ಲದ ಪತ್ರವೊಂದು ಕೆಲವು ದಿನಗಳ ಮುನ್ನ ನನ್ನ ಕೈಸೇರಿತು. ಅದು ಬಾಗ್‌ಬಜಾರಿನಿಂದ ಇಲ್ಲಿಗೆ ಪುನಃ ಕಳುಹಿಸಲ್ಪಟ್ಟಿತು.

ನಿನ್ನ ದೇಹ ಹಾಗೂ ಮನಸ್ಸು ಮೊದಲಿಗಿಂತ ಉತ್ತಮವಾಗಿದೆ ಎಂದು ತಿಳಿದು ನನಗೆ ಅತಿಶಯವಾದ ಆನಂದವುಂಟಾಗಿದೆ. ಅದರಿಂದ ನಿನಗೆ ವಿಶೇಷ ಅನುಕೂಲವಾಗಿದೆ ಎಂಬ ಕಾರಣದಿಂದ ನಾನು ಇಲ್ಲಿನ ಪ್ರಭುವಿಗೆ ವಿಶೇಷವಾಗಿ ಕೃತಜ್ಞನಾಗಿರುವೆ ಎಂದು ತಿಳಿದುಕೋ. ಅವರ ಕೃಪೆಯಿಂದ ನಿನಗೆ ಹೆಚ್ಚಿನ ಉನ್ನತಿಯುಂಟಾಗಲಿ ಎಂಬುದೇ ನನ್ನ ಅಂತರಂಗದ ಪ್ರಾರ್ಥನೆ. ನೀನು ಬೇಲೂರು ಮಠಕ್ಕೆ ಬಂದಿರುವೆ, ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಅವರ ಕೃಪೆಗೆ ಪಾತ್ರನಾಗಿ ಮಂತ್ರದೀಕ್ಷೆ ಪಡೆದಿರುವೆ ಎಂದು ತಿಳಿದು ನನಗೆ ವಿಶೇಷವಾಗಿ ಸಂತಸವುಂಟಾಗಿದೆ. ಅವರ ಕೃಪೆಯಿಂದಲೇ ಎಲ್ಲ ಸಂಗತಿಗಳೂ ನಡೆಯುವುವು ಎಂಬುದನ್ನು ನೀನು ತಿಳಿಯುವೆ. ಗುರು ಹಾಗೂ ಇಷ್ಟದೇವತೆ ಅಭಿನ್ನರು. ಈ ತತ್ತ್ವವನ್ನು ಅವರೇ ಕೃಪೆಮಾಡಿ ತಿಳಿಸಿಕೊಡುವರು. ಗುರುವೇ ಇಷ್ಟದೇವತೆಯಾಗಿ ಪ್ರಕಟಗೊಳ್ಳುವನು, ಅಂದರೆ ಗುರುವಿನಲ್ಲೇ ಇಷ್ಟದೇವತೆಯ ದರ್ಶನವಾಗುವುದು. ಶಕ್ತಿಯ ದೃಷ್ಟಿಯಿಂದ ಇಬ್ಬರೂ ಒಂದೇ – ಈ ರೀತಿಯಲ್ಲಿ ಕ್ರಮವಾಗಿ ಉಪಾಸನೆ ಮಾಡುತ್ತ ಸಿದ್ಧಿಲಾಭವುಂಟಾಗುವುದು. **'ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ। ಗುರುರೇವ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ॥'** ಇದರಿಂದಲೇ ಅದರ ಅಂತರಾರ್ಥವನ್ನು ತಿಳಿಯಬಹುದು. ಅವರ ಮೇಲೆ ಶ್ರದ್ಧಾಬುದ್ಧಿಯನ್ನು ಹೊಂದು. ಎಲ್ಲ ಬಂಧನಗಳೂ ಕಡಿದುಹೋಗುವುವು. ನನ್ನ ಆಂತರಿಕ ಆಶೀರ್ವಾದ ಹಾಗೂ ಪ್ರೀತಿಗಳು.

ಇತಿ,

ಸ್ವಾಮಿ ತುರೀಯಾನಂದ

ನಾನು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದೆ. ಆದರೆ ಕಾಲೇಜು ವಿದ್ಯಾಭ್ಯಾಸ ಮಾಡಲಾಗಲಿಲ್ಲ. ಮನಸ್ಸಿನಲ್ಲಿ ಪ್ರಾರ್ಥನೆ ಏಳತೊಡಗಿತು – 'ಅಮ್ಮಾ, ಮಹಾಮಾಯೇ, ನನಗೆ ದಾರಿ ತೋರಿಸಿಕೊಡು.' ಗೃಹತ್ಯಾಗ ಮಾಡುವೆನೆಂದು ಸಂಕಲ್ಪ ಮಾಡಿಕೊಂಡೆ.

೧೯೨೧ರ ವೈಶಾಖಮಾಸದ ಕೊನೆಯ ಭಾಗದಲ್ಲಿ ತಂದೆಯವರು ಮನೆಯಲ್ಲಿಲ್ಲದ ಸಮಯದಲ್ಲಿ ನಾನು ಅಲ್ಲಿಂದ ಹೊರಬಿದ್ದೆ. (ಕಲ್ಕತ್ತಾದ) ಶಿಯಾಲ್ದಾ ರೈಲ್ವೇ ಸ್ಟೇಶನ್ನಿನಲ್ಲಿ ರಾತ್ರಿಯನ್ನು ಕಳೆದೆ. ಬೆಳಿಗ್ಗೆ 'ಉದ್ಬೋಧನ'ಕ್ಕೆ ಹೋಗಿ, ಶರತ್ ಮಹಾರಾಜರನ್ನು ಭೇಟಿಯಾದೆ. ಅವರು ಬೇಲೂರು ಮಠಕ್ಕೆ ಹೋಗಲು ಹೇಳಿದರು. ನಾನು ಕೂಡಲೇ ಬೇಲೂರು ಮಠಕ್ಕೆ ಹೋದೆ. ಆಗ ಶ್ರೀಮಾತೆಯವರು ಸ್ಥೂಲ ದೇಹದಿಂದಿರಲಿಲ್ಲ. (ಈಗಾಗಲೇ ದೇಹತ್ಯಾಗ ಮಾಡಿದ್ದರು.) ಬೇಲೂರು ಮಠದ 'ವಿಸಿಟರ್ಸ್ ರೂಂ'ನಲ್ಲಿ ನಾನು ಮುಖ ಕೆಳಗು ಮಾಡಿ, ಏಕಾಕಿಯಾಗಿ ಮಲಗಿದ್ದೆ. ಅಲ್ಲಿಗೆ ಬಂದಾಗ ಒಂದು ಸಲವು ಶ್ರೀಮಾತೆಯವರನ್ನು ನೆನಪಿಸಿಕೊಂಡಿರಲಿಲ್ಲ ; ಹಠಾತ್ತನೆ ಈಗ ಅವರ ನೆನಪು ಬಂದುದೇ ತಡ, ನನ್ನ ಹಿಂದೆ ಒಂದು ಮಹಾಶಕ್ತಿ ನಿಂತಿದ್ದಂತೆ ನನಗನ್ನಿಸಿತು. ನೆರಳಿನಂತೆ ದರ್ಶನವಾಯಿತು. ಶ್ರೀಮಾತೆಯವರ ದೀರ್ಘದೇಹ; ಇಳಿಬಿಟ್ಟ ಕೇಶರಾಶಿ ವಿಸ್ತಾರವಾಗಿ, ವಿಪುಲವಾಗಿ ಇಳಿಬಿದ್ದು, ಬಹುತೇಕ ಪಾದಗಳನ್ನೂ ಸ್ಪರ್ಶಿಸುತ್ತಿದ್ದವು. ಅದರೊಂದಿಗೆ ಅವರ ಶ್ರೀಮುಖದಿಂದ ಹೊರಬಂದ ಮಾತುಗಳು ಸ್ಪಷ್ಟವಾಗಿ ಕೇಳಿಸಿದವು. ನನ್ನೊಳಗಿನಿಂದ ಶ್ರೀಮಾತೆ, ''ಕಾಶಿಗೆ ಹೋಗು, ಕಾಶಿಗೆ ಹೋಗು, ಕಾಶಿಗೆ ಹೋಗು'' ಎಂದು ಹೇಳಿದಂತೆ ಭಾಸವಾಯಿತು. ಶ್ರೀಮಾತೆಯವರ ಈ ಬಗೆಯ ದೈವೀ ಆದೇಶವನ್ನು ಪಡೆದು, ನನ್ನ ಮನಸ್ಸು ಆಗ ಒಂದು ಅಸಾಧಾರಣ ಶಕ್ತಿಯಿಂದ ತುಂಬಿಕೊಂಡಿತು. ಆಗ ಸಮಯಸುಮಾರು ಎರಡು ಗಂಟೆ.

ಜ್ಯೇಷ್ಠ ಮಾಸದ ಳರಂದು ಬೆಳಿಗ್ಗೆ ಕಾಶಿಗೆ ಹೋಗಿ ತಲುಪಿದೆ. ಸಾಯಂಕಾಲ ಶ್ರೀರಾಮಕೃಷ್ಣ ಅದ್ವೈತ ಆಶ್ರಮಕ್ಕೆ ಹೋಗಿ,

ಅಲ್ಲಿನ ಅಧ್ಯಕ್ಷರನ್ನು ಭೇಟಿಯಾದೆ. ಅಧ್ಯಕ್ಷರಾಗಿದ್ದ ಚಂದ್ರ ಮಹಾರಾಜರು (ಸ್ವಾಮಿ ನಿರ್ಜರಾನಂದರು) ನನಗೆ ಆಶ್ರಮದಲ್ಲಿ ಜಾಗ ಕೊಡಲು ಒಪ್ಪಿದರು. ಆಗ ಗಂಟೆ ಹನ್ನೆರಡಾಗಿದ್ದುದರಿಂದ, ಒಂದು ರಾತ್ರಿಯನ್ನು ಹೊರಗೆ ಎಲ್ಲಾದರೂ ಕಳೆದು, ಮರುದಿನ ಬರುವಂತೆ ಹೇಳಿದರು.

ಕಾಶಿ ಶ್ರೀರಾಮಕೃಷ್ಣ ಅದ್ವೈತ ಆಶ್ರಮ ಸೇರಿದ್ದು: ೧೯೨೨ರ ಮೇ ೧೯ ರಂದು. ಉಪುದಾ (ಸ್ವಾಮಿ ಯೋಗೀಶ್ವರಾನಂದರು) ನನ್ನನ್ನು ಗಂಗಾಸ್ನಾನ ಹಾಗೂ ಶ್ರೀ ವಿಶ್ವನಾಥ-ಅನ್ನಪೂರ್ಣಾ ದರ್ಶನ ಮಾಡಿಸಿದರು. ಶ್ರೀಮಾತೆಯವರ ಆದೇಶದಂತೆ ನಾನು ಕಾಶಿಗೆ ಬಂದು ತಲುಪಿದೆ ಹಾಗೂ ರಾಮಕೃಷ್ಣ ಮಹಾಸಂಘಕ್ಕೆ ಸೇರಿಕೊಂಡೆ.

ವಿಧಿವಿಲಾಸದಂತೆ ೧೯೩೫ರ ಜುಲೈ ತಿಂಗಳಲ್ಲಿ ರಾಮಕೃಷ್ಣ ಮಹಾಸಂಘದಲ್ಲಿ ನನ್ನ ಜೀವನ ಕೊನೆಗೊಂಡಿತು. ಅಂದಿನಿಂದ ಇಂದಿನವರೆಗೂ ನನ್ನ ಜೀವನಯಾತ್ರೆ ಅನೇಕ ವಿಘ್ನಗಳಿಂದಲೂ, ದ್ವಂದ್ವಗಳಿಂದಲೂ ಕೂಡಿ, ಚಿತ್ರವಿಚಿತ್ರವಾದ ಮಾರ್ಗದಲ್ಲಿ ಸಾಗುತ್ತಿದೆ. ಆದರೆ ನನಗೆ ಅನೇಕ ಬಾರಿ ಅನುಭವವಾಗಿದೆ, ಅನೇಕ ವಿಪರ್ಯಾಸಗಳಿಂದ ನನ್ನ ಕೂಡಿದ ಜೀವನವನ್ನು ಇಚ್ಛಾಮಯಿಯಾದ ಮಾತೆ ಅಸೀಮ ಕರುಣೆಯಿಂದ ತಮ್ಮ ಇಚ್ಛೆಗನುಸಾರವಾದ ಕರ್ಮಗಳಿಂದ ನಡೆಸುತ್ತಿದ್ದಾರೆ — ಎಂದು.

ಪೂಜ್ಯ ಶರತ್ ಮಹಾರಾಜರು ೧೯೩೫ರ ಡಿಸೆಂಬರ್ ೨೮ ರಂದು ನನಗೆ ಒಂದು ಪತ್ರ ಬರೆದಿದ್ದರು:

ಆತ್ಮೀಯರಿಗೆ..

ಶ್ರೀಮಾತೆಯವರು ನಿನ್ನ ಮೇಲೆ ಕೃಪೆ ತೋರಿದಾಗಲೇ ನಿನ್ನ ಜೀವನ ಧನ್ಯವಾಯಿತು - ಯಾವಾಗಲೂ ಈ ಭಾವನೆಯನ್ನು ಇಟ್ಟುಕೋ ಹಾಗೂ ಇದೇ ರೀತಿ ಸದಾ ಸಂತಸದಿಂದಿರು..

ಶಾರದಾನಂದ

ಶ್ರೀಮಾತೆಯವರ 'ಭಾರಿ' ಹಾಗೂ 'ದ್ವಾರಿ'ಯ* ಈ ಮಾತುಗಳು ನನ್ನ ಇಡೀ ಜೀವನಕ್ಕೆ ದಾರಿದೀಪವಾಗಿಬಿಟ್ಟಿವೆ. ❃

* ಸ್ವಾಮಿ ಶಾರದಾನಂದರು ಶ್ರೀಮಾತೆಯವರ ಭಾರ ಹೊತ್ತಿದ್ದುದರಿಂದ ಅವರು 'ಭಾರಿ'; ಹಾಗೂ ಶ್ರೀಮಾತೆಯವರ ಕೊನೆಯ ದಿನಗಳಲ್ಲಿ ಹಗಲಿರುಳೂ ದ್ವಾರಪಾಲಕರಂತೆ ಅಕ್ಷರಶಃ ಅವರನ್ನು ಕಾದದ್ದರಿಂದ ಅವರು 'ದ್ವಾರಿ' (ದ್ವಾರಪಾಲಕ). *(-ಅನು)*

## ಶ್ರೀಮಾತೆಯವರ ಉಪದೇಶಗಳು



❃ ಸಾಧುವಿಗೆ ರಾಗ-ದ್ವೇಷಗಳಿರಬಾರದು. ಅವನು ಎಲ್ಲವನ್ನೂ ಸಹಿಸಿಕೊಳ್ಳಬೇಕು. ಶ್ರೀರಾಮಕೃಷ್ಣರು ಹೃದಯನಿಗೆ ಹೇಳುತ್ತಿದ್ದರು, 'ನೀನು ನನ್ನ ಮಾತನ್ನು ಸಹಿಸಿಕೊಳ್ಳಬೇಕು, ನಾನು ನಿನ್ನ ಮಾತನ್ನು ಸಹಿಸಿಕೊಳ್ಳುತ್ತೇನೆ. ಹಾಗಿದ್ದರೆ ಮಾತ್ರ ನಡೆಯುತ್ತದೆ. ಇಲ್ಲದಿದ್ದರೆ ಖಜಾಂಚಿಯನ್ನು ಕರೆಯಬೇಕಾಗುತ್ತದೆ' ಅಂತ.

❃ **ಶಿಷ್ಯ :** ನಾನು ಸ್ವಲ್ಪ ಪ್ರಾಣಾಯಾಮ ಅಭ್ಯಾಸ ಮಾಡುತ್ತಿದ್ದೇನೆ. ಮುಂದುವರಿಸಲೆ?

**ಶ್ರೀಮಾತೆ :** ಸ್ವಲ್ಪ ಸ್ವಲ್ಪ ಮಾಡಬಹುದು. ಹೆಚ್ಚು ಅಭ್ಯಾಸ ಮಾಡಿ ತಲೆ ಬಿಸಿ ಮಾಡಿಕೊಳ್ಳುವುದು ಬೇಡ. ಮನಸ್ಸು ತಾನಾಗಿಯೇ ಸ್ಥಿರಗೊಳ್ಳುವುದಾದರೆ ಪ್ರಾಣಾಯಾಮದ ಅಗತ್ಯವೇನಿದೆ?

❃ **ಶಿಷ್ಯ :** ಕುಂಡಲಿನಿ ಜಾಗೃತವಾಗದೆ ಏನೂ ಸಾಧಿಸಿದಂತಾಗಲಿಲ್ಲ.

**ಶ್ರೀಮಾತೆ :** ಜಾಗೃತವಾಗುವುದು. ಭಗವಂತನ ನಾಮ ಜಪ ಮಾಡುತ್ತ ಮಾಡುತ್ತ ಎಲ್ಲವೂ ಸಾಧ್ಯವಾಗುವುದು. ಮನಸ್ಸು ಸ್ಥಿರವಾಗದೆ ಹೋದರೂ ಕುಳಿತುಕೊಂಡೇ ಲಕ್ಷಗಟ್ಟಳೆ ನಾಮಜಪ ಮಾಡಬಹುದು. ಕುಂಡಲಿನಿ ಜಾಗೃತವಾಗುವ ಮೊದಲು ಅನಾಹತ ಧ್ವನಿ ಕೇಳಿಸುವುದು. ಜಗನ್ಮಾತೆಯ ಕೃಪೆಯಿಲ್ಲದೆ ಯಾವುದೂ ಸಾಧ್ಯವಿಲ್ಲ.

❃ **ಶಿಷ್ಯ :** ಅಮ್ಮಾ, ನನಗೆ ಕಲ್ಲಿನ ಶಿವಲಿಂಗದಲ್ಲಿ ಆಸಕ್ತಿ ಉಳಿದಿಲ್ಲ.

**ಶ್ರೀಮಾತೆ :** ಇದೇನು ಮಗೂ! ಎಂತೆಂತಹ ಮಹಾಪಾಪಿಗಳೂ ಕಾಶಿಗೆ ಬಂದು ವಿಶ್ವನಾಥನ ಸ್ಪರ್ಶ ಮಾಡಿ ಉದ್ಧಾರವಾಗುತ್ತಿದ್ದಾರೆ. ಅವರೆಲ್ಲರ ಪಾಪಗಳನ್ನು ಅವನು ನಿರ್ವಿಕಾರ ಭಾವದಿಂದ ಸ್ವೀಕರಿಸುತ್ತಿದ್ದಾನೆ.

❃ **ಶಿಷ್ಯ :** ಭಗವಂತನೇ ಎಲ್ಲರ ತಂದೆ, ತಾಯಿಯಾಗಿದ್ದರೆ ಅವನೇಕೆ ಅವರಿಂದ ಪಾಪಕೃತ್ಯಗಳನ್ನು ಮಾಡಿಸುತ್ತಾನೆ?

**ಶ್ರೀಮಾತೆ :** ಅವನೇ ಜೀವಜಂತುಗಳೆಲ್ಲವೂ ಆಗಿದ್ದಾನೆ. ಆದರೆ ಸಂಸ್ಕಾರ ಹಾಗೂ ಕರ್ಮಾನುಸಾರ ಎಲ್ಲರೂ ತಮ್ಮ ತಮ್ಮ ಕರ್ಮಫಲಗಳನ್ನು ಅನುಭವಿಸುತ್ತಾರೆ. ಸೂರ್ಯ ಒಬ್ಬನೇ ; ಆದರೆ ಭಿನ್ನ ಭಿನ್ನ ಪ್ರದೇಶ ಹಾಗೂ ಭಿನ್ನ ವಸ್ತುಗಳ ಭೇದದಿಂದ ಅವನ ಪ್ರಕಾಶ ಬೇರೆ ಬೇರೆಯಾಗಿರುತ್ತದೆ.

*'ಶ್ರೀ ಶಾರದಾದೇವಿ ವಚನವೇದ', ಪು.೩೧೯-೨೨*